**ದಿನಾಂಕ 07.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವಿ.ಬಿ ವಕೀಲರಿಂದಃ**

ನಾನು 2010 ನೇ ಇಸವಿಯಿಂದ ವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ವಾದಿ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯು ಆತರೈಸೇಷನ್ ಲೆಟರ್ ಇರುತ್ತದೆ. ನಾನು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ದಿನಾಂಕ 04.12.2013 ರಂದು ಕಾರಿಜಾಂಡಂ ಕೊಡಲಾಗಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯು ನಿ.ಪಿ.1 ಇರುತ್ತದೆ. ನಿ.ಪಿ.1 ದಾಖಲೆಯ ಪ್ರಕಾರ ನಾಲ್ಕನೇ ಮಹಡಿಯಿಂದ ಏಳನೇ ಮಹಡಿಯವರೆಗೆ ಒಪ್ಪಂದವಾಗಿರುತ್ತದೆ ಎಂದರೆ ಸರಿ. ನಾವು ಗುತ್ತಿಗೆ ಪಡೆದಾಗ ಕಟ್ಟಡದ 4 ನೇ ಮಹಡಿಯ ಕೆಳಗಿನ ಮಹಡಿಗಳಲ್ಲಿ ಸಿವಿಲ್ ವರ್ಕ್‌ನಡೆಯುತ್ತಿತ್ತು ಎಂದರೆ ಸರಿ. ನಿ.ಪಿ.1 ರ ಪ್ರಕಾರ 1 ಚದರಡಿಗೆ 37 ರೂಪಾಯಿ ಇರುತ್ತದೆ ಎಂದರೆ ಸರಿ.

(ಈ ಸಮಯದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲು ಮುಂದೂಡಲಾಯಿತು)

This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-6.pdf

OS No. 8122/2017
P.W.1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಸುಭಾಷ ಸಂಕದ)
65 ನೇ ಅ.ನ.ಸಿ.ಸೆ.ನ್ಯಾಯಾಧೀಶರು(ಸಿಸಿಹೆಚ್-66)
ಬೆಂಗಳೂರು ನಗರ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KABC010292912017/truecopy/order-6.pdf